**ಓ ಎಸ್ ನಂಃ 292-15**
**ಪಿ ಡಬ್ಲ್ಯೂ ಃ 1**

**ದಿಃ 21-09-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಕೆ ಎನ್ ಡಿ ವಕೀಲರಿಂದ**

12. ಈ ದಾವೆಯನ್ನು ಸಲ್ಲಿಸಿದ ಮ್ಯಾನೇಜರ್ ರಾಮಚಂದ್ರ ರವರು ಈಗಲೂ ಸರ್ವಿಸ್ ನಲ್ಲಿದ್ದಾರೆ. ನಮ್ಮ ಹೆಡ್ ಆಫೀಸ್ ಮೊದಲು ಮೈಸೂರಿನಲ್ಲಿತ್ತು. ಈಗ ಬಳ್ಳಾರಿಯಲ್ಲಿದೆ. ಯಾವುದೇ ದಾವೆ ಸಲ್ಲಿಸಲು ನಮ್ಮ ಹೆಡ್ ಆಫೀಸ್ ನ ಕಮಿಟಿಯ ರೆಸಲ್ಯೂಷನ್ ಬೇಕಾಗುತ್ತದೆ ಅಂದರೆ ಸರಿಯಲ್ಲ. ನಮ್ಮ ಬ್ಯಾಂಕಿಗೆ ಬೈಲಾ ಇದೆ. ಬ್ಯಾಂಕಿಗೆ ರೂಲ್ಸ್ ಅಂಡ್ ರೆಗ್ಯೂಲೇಷನ್ಸ್ ಇದೆ. ನಮ್ಮ ಬ್ಯಾಂಕಿನ ರೂಲ್ಸ್ ಅಂಡ್ ರೆಗ್ಯೂಲೇಷನ್ಸ್ ನ್ನು ಹಾಜರುಪಡಿಸಬಹುದು. ರೂಲ್ಸ್ ಅಂಡ್ ರೆಗ್ಯೂಲೇಷನ್ಸ್ ಪ್ರಕಾರ ದಾವೆ ಸಲ್ಲಿಸುವ ಅಧಿಕಾರ ಮ್ಯಾನೇಜರ್ ಗಳಿಗೆ ಇರುತ್ತದೆ. ನಾನು ನ್ಯಾಯಾಲಯಕ್ಕೆ ಪವರ್ ಆಫ್ ಅಟಾರ್ನಿಯನ್ನು ಹಾಜರುಪಡಿಸಿರುವುದಿಲ್ಲ. ಈ ದಾವೆ ಸಲ್ಲಿಸಿದ ರಾಮಂಚದ್ರ ರವರಿಗೆ ಕೂಡಾ ಪವರ್ ಆಫ್ ಅಟಾರ್ನಿ ಕೊಡಲಾಗಿತ್ತು. ಅವರು ಪವರ್ ಆಫ್ ಅಟಾರ್ನಿ ಹಾಜರುಪಡಿಸಿರುವುದಿಲ್ಲ.

13. ಕಾವೇರಿ ಗ್ರಾಮೀಣ ಬ್ಯಾಂಕಿಗೆ ಬೋರ್ಡ್ ಆಫ್ ಡೈರೆಕ್ಟರ್ಸ್ ಇದ್ದಾರೆ. ಆ ಬೋರ್ಡ್ ಆಫ್ ಡೈರೆಕ್ಟರ್ಸ್ ನ ಅನುಮತಿ ಪಡೆದು ದಾವೆ ಸಲ್ಲಿಸಬೇಕು ಅಂದರೆ ಸರಿಯಲ್ಲ. ಯಾವುದೇ ದಾವೆ ಸಲ್ಲಿಸಲು ಬ್ರಾಂಚ್ ಮ್ಯಾನೇಜರ್ ಅಧಿಕಾರದಲ್ಲಿರುತ್ತಾರೆ. ರಾಮಚಂದ್ರರವರಿಗೆ ಬೋರ್ಡ್ ಆಫ್ ಡೈರೆಕ್ಟರ್ಸ್ ಯಾವುದೇ ಪವರ್ ಆಫ್ ಅಟಾರ್ನಿ ನೀಡದೇ ಇದ್ದುದದರಿಂದ ಅವರಿಗೆ ಈ ದಾವೆ ಸಲ್ಲಿಸಲು ಅಧಿಕಾರ ಇರಲಿಲ್ಲ ಅಂದರೆ ಸರಿಯಲ್ಲ. ನಾನು ವಾದ ಪತ್ರ ಓದಿರುತ್ತೇನೆ. ವಾದಿ ಪತ್ರದಲ್ಲಿ ಸದರಿ ರಾಮಂಚದ್ರಪ್ಪ ಪವರ್ ಆಫ್ ಅಟಾರ್ನಿ ಆಧಾರದಲ್ಲಿ ಬ್ಯಾಂಕನ್ನು ಪ್ರತಿನಿಧಿಸುತ್ತಿದ್ದಾರೆಂದು ನಮೂದು ಇಲ್ಲ. ಈ ದಾವೆಯಲ್ಲಿ ಹೇಳಿರುವ ಸಾಲದ ವ್ಯವಹಾರವನ್ನು ನಾನು ನಿರ್ವಹಿಸಿಲ್ಲ. ನನಗೆ ಆ ಸಾಲ ವ್ಯವಹಾರದ ವೈಯಕ್ತಿಕ ಮಾಹಿತಿ ಇಲ್ಲ. ಈ ದಾವೆ ಸಲ್ಲಿಸುವ ಮುಂಚೆ ಸ್ಟೇಟ್‌ಮೆಂಟ್ ಅಕೌಂಟ್ ನ್ನು ಪ್ರತಿವಾದಿಗೆ ನೀಡಿದ್ದೇನೆ. ನಾವು ಅದನ್ನು ಕೊಟ್ಟಿಲ್ಲ ನೋಟೀಸ್ ಕಳಹಿಸಿರುತ್ತೇವೆ.

14. ಬ್ಯಾಂಕ್ ಸ್ಟೇಟ್ಮೆಂಟ್ ಅನ್ನು ಸಾಲಗಾರ ಕೇಳಿದರೆ ಮಾತ್ರ ಕೊಡುತ್ತೇವೆ. ಸಾಲದ ಖಾತೆಯನ್ನು

ಬ್ರಾಂಚ್ ಮ್ಯಾನೇಜರ್ ರವರೇ ನೋಡುತ್ತಾರೆ. ದಾವೆ ಸಲ್ಲಿಸುವ ಮುಂಚೆ ಕಾನೂನಿನ ಸಲಹೆ ಪಡೆದಿರುತ್ತೇವೆ. ಕಾನೂನಿನ ಸಲಹೆಯ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ಆ ಬಗ್ಗೆ ದಾಖಲೆ ಹಾಜರುಪಡಿಸಬಲ್ಲೆ. ಬೆಳೆ ಸಾಲ ಮತ್ತು ಪಾರಂ ಹೌಸ್ ಸಾಲವನ್ನು ಪ್ರತಿವಾದಿಗೆ ನೀಡಿದ್ದೇವೆ. ಬೆಳೆ ಸಾಲ ರೂ. 1 ಲಕ್ಷ 4 ಸಾವಿರ ವನ್ನು ಅವರ ಖಾತೆಗೆ ವರ್ಗಾವಣೆ ಮಾಡಿರುತ್ತೇವೆ. ಆ ಬಗ್ಗೆ ದಾಖಲೆ ಇದೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಆ 1 ಲಕ್ಷ 4 ಸಾವಿರದ ಪೈಕಿ 40 ಸಾವಿರವನ್ನು ಯಾವುದೇ ವೆಚ್ಚಕ್ಕಾಗಿ ನಾವು ಕಡಿತ ಮಾಡಿಲ್ಲ. ನಾವು ಬಡ್ಡಿಯನ್ನು ಆರ್ ಬಿ ಐ ನಿರ್ದೇಶನದಂತೆ ಹಾಕುತ್ತೇವೆ. 1 ವರ್ಷದೊಳಗೆ ಬೆಳೆ ಸಾಲವನ್ನು ಪಾವತಿಸಿದರೆ ಬಡ್ಡಿ ಸಬ್ಸಿಡಿ ಇದೆ. ಆ ರೀತಿ ಬಡ್ಡಿ ಸಬ್ಸಿಡಿ ಇದೆ ಎಂದು ಮೌಖಿಕವಾಗಿ ಅವರಿಗೆ ತಿಳಿಸಿದ್ದೇವೆ.

15. ಸಾಲ ಕೊಟ್ಟ ದಿನಕ್ಕೆ ಬಡ್ಡಿ 13.5 ಇತ್ತು ಎಂದು ತೋರಿಸುವ ಆರ್ ಬಿ ಐ ನಿರ್ದೇಶನ ಇತ್ತು ಎಂದು ತೋರಿಸಲು ದಾಖಲೆ ಇದೆ. ಸಾಲ ಪಡೆದುಕೊಂಡಾಗ ನಾವು ಖಾಲಿ ಪತ್ರಕ್ಕೆ ಸಹಿ ಮಾಡಿಸಿ ಸಾಲ ಕೊಡುವುದಿಲ್ಲ. ಈ ದಾವೆಯಲ್ಲಿ ಹಾಜರುಪಡಿಸಿದ ದಾಖಲೆಗಳಲ್ಲಿರುವ ಕೈಬರಹ ಆಗಿನ ಮ್ಯಾನೇಜರ್ ರವರ ಕೈ ಬರಹ ಆಗಿರುತ್ತದೆ. ಈ ಸಾಲ ಪಡೆದುಕೊಂಡ ನಂತರ ಸಾಲ ಮನ್ನಾ ಕೇಂದ್ರ ಸರ್ಕಾರದ ಸ್ಕೀಮ್ ನಲ್ಲೆ ಆಗಿತ್ತು. ಆ ಪ್ರಕಾರ ಪ್ರತಿವಾದಿಗೂ ಕೂಡಾ ಅದರ ಬೆನಿಪಿಟ್ ಸಿಕ್ಕಿತು. ಒ ಟಿ ಎಸ್ ಸ್ಕೀಮ್ ಪ್ರಕಾರ 5 ಎಕರೆ ಮೇಲ್ಪಟ್ಟ ಜಮೀನಿರುವ ಸಾಲಗಾರರು ಸಾಲದ ಪೈಕಿ ಶೇ. 75 ಮೊತ್ತವನ್ನು ಪಾವತಿಸಿದರೆ
ಉಳಿದ ಶೇ. 25 ಮೊತ್ತ ಮನ್ನಾ ಎಂಬ ಯೋಜನೆ ಆಗಿತ್ತು. ಅದರ ಬಗ್ಗೆ ಸರ್ಕ್ಯೂಲರ್ ನಮ್ಮ ಬಳಿ ಇದೆ. ಅದನ್ನು ಹಾಜರುಪಡಿಸಬಹುದು. ಈ ಬಗ್ಗೆ ಪ್ರತಿವಾದಿಗೆ ಪತ್ರದ ಮೂಲಕ ಹೇಳಿದ್ದೇವೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಅದನ್ನು ಹಾಜರುಪಡಿಸಬಹುದು.

16. ಸಾಲ ಪಡೆದುಕೊಂಡ ನಂತರ ಪ್ರತಿವಾದಿ ಸದರಿ ಬೆಳೆ ಸಾಲದ ಖಾತೆ ಸ್ವಲ್ಪನೂ ಕಟ್ಟಿಲ್ಲ. ಸಾಲ ಕೊಟ್ಟ ನಂತರ ಈ ದಾವೆ ಸಲ್ಲಿಸುವ ತನಕ ಬಡ್ಡಿಯಲ್ಲಿ ವ್ಯತ್ಯಾಸ ಆಗಿದೆ. ಆ ಮಧ್ಯದಲ್ಲಿ ಎಷ್ಟು ಸಾರಿ ಬಡ್ಡಿಯಲ್ಲಿ ಹೆಚ್ಚು ಕಡಿಮೆ ಆಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ. ನಾನು ಹಾಜರುಪಡಿಸಿದ ದಾಖಲೆಯನ್ನು ನೋಡಿ ನನಗೆ ಈಗ ಹೇಳಲು ಆಗುವುದಿಲ್ಲ. ಈ ದಾವೆಯಲ್ಲಿ ಬಡ್ಡಿ ಸೇರಿಸುವಾಗ ಆ ಮಧ್ಯದಲ್ಲಿ ಹೆಚ್ಚು ಕಡಿಮೆ ಆದ ಬಡ್ಡಿಯನ್ನು ಲೆಕ್ಕ ಹಾಕಿ ಹೇಳಿರುವುದು ಆಗಿರುತ್ತದೆ.

17. ದಾವೆ ಸಲ್ಲಿಸುವ ಕಾಲದಲ್ಲಿ ರೂ. 2,43,998/- ದಿಃ04.08.2015 ಕ್ಕೆ ಅನುಗುಣವಾಗಿ ಬೆಳೆ ಸಾಲದ ಮೊತ್ತವಾಗಿರುತ್ತದೆ. ಆ ರೀತಿ ಬಡ್ಡಿ ಬದಲಾವಣೆ ಆದಾಗ ಕಂಪ್ಯೂಟರ್ ನಲ್ಲಿ ಅದರ ಬಗ್ಗೆ ಬದಲಾದಂತೆ ಲೆಕ್ಕ ಮಾಡಿ ಕಂಪ್ಯೂಟರ್ ಜನರೇಟರ್ ಸ್ಟೇಟ್‌ಮೆಂಟ್ ಅನ್ನು ನಾವು ನೋಡಿ ಆ ರೀತಿ ಬಾಕಿ ಸಾಲದ ಮೊತ್ತವನ್ನು ನಮೂದಿಸಿರುತ್ತೇವೆ. ಸಾಲದ ಮೊತ್ತವನ್ನು ಪ್ರತ್ಯೇಕವಾಗಿ ಲೆಕ್ಕ ಹಾಕಿ ಹಾಗೂ ಬಡ್ಡಿಯನ್ನು ಪ್ರತ್ಯೇಕವಾಗಿ ಲೆಕ್ಕ ಹಾಕಿ ಸ್ಟೇಟ್‌ಮೆಂಟ್ ಅನ್ನು ಹಾಜರುಪಡಿಸಿಲ್ಲ. ರೂ. 2,43,998/- ಬಾಕಿ ಹಣದಲ್ಲಿ ರೂ. 1 ಲಕ್ಷ 4 ಸಾವಿರ ಬಿಟ್ಟು ಉಳಿದಿದ್ದು ಬಡ್ಡಿ ಮೊತ್ತ ಆಗಿರುತ್ತದೆ. ನಿಪಿ

13 ರ ಪ್ರಕಾರ ಆ ರೀತಿ ಬಡ್ಡಿ ಸೇರಿಸಿರುವುದು ನಮೂದು ಆಗಿದೆ.

18. ಪ್ರತಿವಾದಿ ಕೇಂದ್ರ ಸರ್ಕಾರದ ಸಾಲ ಮನ್ನಾ ಸ್ಕೀಂಗೆ ಅರ್ಹರಾಗಿದ್ದರೂ ಕೂಡಾ ನಾವು ಅದನ್ನು ಅವರಿಗೆ ಕೊಟ್ಟಿಲ್ಲ ಅಂದರೆ ಸರಿಯಲ್ಲ. ನಾನು ಸ್ಟೇಟ್ ಲೆವಲ್ ಬ್ಯಾಂಕರ್ಸ್ ಕಮಿಟಿ ಕರ್ನಾಟಕದ ರವರ ಸರ್ಕ್ಯೂಲರ್ ನ್ನು ಓದಿದ್ದೇನೆ. ಅಂತ ಸರ್ಕ್ಯೂಲರ್ ನಮ್ಮ ಬ್ಯಾಂಕ್ ನಲ್ಲಿದೆಯಾ ಎಂದು ಗೊತ್ತಿಲ್ಲ. ಆ ಸರ್ಕ್ಯೂಲರ್ ನಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದುದರಿಂದ ಕೌನ್ಸಿಲಿಂಗ್ ಕೊಟ್ಟು ಸಾಲ ಪಾವತಿಸಲು ಸಮಯ ನೀಡಿಬೇಕು ಎಂದು ಹೇಳಿದೆ ಅಂದರೆ ಗೊತ್ತಿಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**